ಮತ್ತು ಮುಂದಿನ ಲೋಕಸಭೆ ಚುನಾವಣೆಯನ್ನು ಬಹಿಷ್ಕಾರ ಮಾಡುವ ವಿಚಾರದಲ್ಲಿ ಕೂಡ ಇದ್ದಾರೆ, ಅಲ್ಲಿ ಪರಿಸ್ಥಿತಿಯು ಬಹಳ ಗಂಬೀರ ಇದೆ. ಆದ್ದರಿಂದ ಸರಕಾರ ಒಂದು ಹೇಳಿಕೆಯನ್ನು ಕೊಡಬೇಕು.

ಅಧ್ಯಕ್ಷರು: ಹಾಗಾದರೆ ಸರಕಾರದವರು ಏನೆಂದು ಹೇಳಿಕೆಯನ್ನು ಕೊಡಬೇಕು?

ಶ್ರೀ ಮಲ್ಲಿಕಾರ್ಜುನ ದಿವಟರ್: ಮುಂದೆ ಜಿಲ್ಲೆಗಳನ್ನು ಪುರರ್ ರಚಿಸುವಾಗ ಕೊಪ್ಪಳ ಜಿಲ್ಲೆಯನ್ನು ಮಾಡುತ್ತೇವೆ ಎಂದು ಹೇಳ ಬೇಕು. ಮೊದಲ ಕಂತಿನಲ್ಲಿಯೇ ಮಾಡಬೇಕು.

4) ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ ಔಷದಿಯ ಕೊರತೆ.

ಶ್ರೀ ರುಕ್ಮಯ್ಯ ಪೂಜಾರಿ: ಮಾನ್ಯ ಅಧ್ಯಕ್ಷರೆ, ಮಂಗಳೂರು ವೆನ್‌ಲಾಕ್ ಆಸ್ಪತ್ರೆಯಲ್ಲಿ ಮೆಡಿಸಿನ್‌ನ ಕೊರತೆಯ ಬಗ್ಗೆ ತುಂಬಾ ದೂರು ಬರುತ್ತಾ ಇದೆ. ನಮ್ಮ ಹಳ್ಳಿಗಳಿಂದ ಅಲ್ಲಿಗೆ ಹೋಗತಕ್ಕಂಥ ಪಾಪದ ಜನರು ಅಲ್ಲಿಗೆ ಹೋಗಿ ಉಪಚಾರಕ್ಕೆ ಹೋದಾಗ ಅಲ್ಲಿಯ ಡಾಕ್ಟರು ಅವರಿಗೆ ಸುಮಾರು 100-200 ರೂಪಾಯಿಗಳ ಔಷಧಿಗೆ ಚೀಟಿ ಬರೆದುಕೊಡುತ್ತಾರೆ. ಬಡವರು ಹೋಗಿ ಎಲ್ಲಿಂದ ಈ ಹಣವನ್ನು ತರುವುದು? ಮತ್ತು ಅಲ್ಲಿರತಕ್ಕಂಥ ಮೆಶಿನ್ಸ್ ಕೂಡ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಇನ್ನೂ ಅನೇಕ ದೂರುಗಳು ಬರುತ್ತಾ ಇವೆ. ಆ ಬಗ್ಗೆ ಸುಕ್ತ ತನಿಖೆಯನ್ನು ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ತಮ್ಮಲ್ಲಿ ನನ್ನ ಒಂದು ಅರಿಕೆ ಇದೆ. ನಾನು 4-3-91ಕ್ಕೆ ಒಂದು ವಿಚಾರವನ್ನು ಗಮನ ಸೆಳೆಯುವ ಸೂಚನೆಯ ಮೂಲಕ ತೆಗೆದುಕೊಳ್ಳಬೇಕೆಂದು ಕಳುಹಿಸಿದ್ದೆ. 22 ದಿವಸಗಳು ಆಯಿತು. ಇದುವರಿಗೆ ಅದು ಬಂದಿಲ್ಲ, ದಯಮಾಡಿ ಅದು ಉಂಟೋ ಇಲ್ಲವೋ ಎಂಬುದನ್ನಾದರೂ ತಾವುಗಳು ಹೇಳ ಬೇಕು. ಇಲ್ಲವಾದರೆ ನನಗೆ ದಯಮಾಡಿ ಅವಕಾಶ ಕೊಟ್ಟರೆ ಅದನ್ನು ನಾನು ಹೇಳುತ್ತೇನೆ ಮಾನ್ಯ ಗೃಹಸಚಿವರೂ ಇದ್ದಾರೆ ಏನಾದರೂ ಉತ್ತರವನ್ನು ಹೇಳುವುದಾದರೆ ಹೇಳಬಹುದು. ಅನುಮತಿ ಕೊಟ್ಟರೆ ಹೇಳುತ್ತೇನೆ, ಬಹಳ ಪ್ರಯತ್ನಪಟ್ಟೆ ನಿಮಗೆ ಖಾಸಗಿಯಾಗಿಯೂ ಹೇಳಿದ್ದೇನೆ. ಹೇಳದಿದ್ದರೆ ನನ್ನ ಕರ್ತವ್ಯಲೋಪ ಮಾಡಿದಹಾಗೆ ಆಗುತ್ತದೆ. ತಾವುಗಳು ಅವಕಾಶ ಕೊಟ್ಟರೆ ನನ್ನ ಕರ್ತವ್ಯವನ್ನು ಪೂರೈಸುವುದಕ್ಕೆ ಆಗುತ್ತದೆ.

5) ರಾಜ್ಯದ ವಿವಿಧ ಬಾಗಗಳಲ್ಲಿ ಕುಡಿಯುವ ನೀರಿನ ಅಭಾವ

ಶ್ರೀಮತಿ ಮೋಟಮ್ಮ: ಮಾನ್ಯ ಅಧ್ಯಕ್ಷರೆ, ಮೂಡಿಗೆರೆ ಟೌನ್ ಮತ್ತು ಕಳಸ ಹೋಬಳಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಸಿಕ್ಕಾಪಟ್ಟೆ ಜಾಸ್ತಿಯಾಗಿದೆ. ಪಿ.ಡಬ್ಲ್ಯೂ.ಡಿ ಟ್ಯಾಂಕರ್‌ನಲ್ಲಿ ಪ್ರತಿನಿತ್ಯ ನೀರನ್ನು ಒದಗಿಸುವ ವ್ಯವಸ್ಥೆ ಇದೆ. ನಾನು ಇದರ ಬಗ್ಗೆ ಸರ್ಕಾರದ ಗಮನಕ್ಕೆ ತರಬೇಕೆಂದು ನಿಯಮ 334ರ ಮೇಲೆ ನೋಟೀಸ್ ಹಾಕಿದ್ದೆ. ಆದರೆ ಅದು ಇವೊತ್ತ ಬಂದಿಲ್ಲ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಇಲ್ಲಿದ್ದಾರೆ. ಅಲ್ಲಿ 29ರಂದು ಮುಖ್ಯಮಂತ್ರಿಯವರ ಕಾರ್ಯಕ್ರಮವಿದೆ. ಅವರು ಕೊಡದಲ್ಲಿ ನೀರನ್ನು ತೆಗೆದುಕೊಂಡು ಹೋದರೆ ಅದು ಸರಿಯಾಗುವುದಿಲ್ಲ. ಗ್ರಾಮೀಣಾಭಿವೃದ್ಧಿ ಸಚಿವರು ಅದನ್ನು ನಿವಾರಣೆ ಮಾಡಲು ಏನಾದರೂ ಕ್ರಮಕೈಗೊಳ್ಳುತ್ತಾರೆಯೇ?

ಶ್ರೀ ಬಿ. ಬಸವಲಿಂಗಪ್ಪ: ಮಾನ್ಯ ಸದ್ಯಸಿಣಿಯವರಾದ ಮೋಟಮ್ಮನವರ ಮಾತನ್ನು ಕೇಳಿದ್ದೇನೆ. ಅವರು ಕೇಳಿದ್ದನ್ನೆಲ್ಲ ಮಂಜೂರು ಮಾಡಲಿಕ್ಕೆ ಆದೇಶ ಕೊಟ್ಟಿದ್ದೇನೆ. ಅವರ ಕೆಲಸವನ್ನು ಮಾಡುವುದನ್ನೆಲ್ಲಾ ಮಾಡಿದ್ದೇನೆ.